**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ**

**ಸಿ.ಸಿ. ನಂ.622 /2019**

**ಪ್ರಾಸಾ-1 ಚಾಸಾ-1**

**ಸಾಕ್ಷಿಗೆ ದಿನಾಂಕಃ28.06.2025 ರಂದು ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರೆದ ಪಾಟೀಸವಾಲು ಆರೋಪಿ ನಂಬರ್ 1 ರವರ ಪರ**

**ಶ್ರೀಃ ಎಂ.ಡಿ.ಜೆ. ವಕೀಲರಿಂದ**

6. ಆರೋಪಿ ನಂಬರ್ 1 ರವರು ನನಗೆ 25 ವರ್ಷಗಳಿಂದ ಪರಿಚಯ. ನಾನು ಪಿ.ಯು.ಸಿ ಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ನ್ಯಾಯಾಲಯದ ಪ್ರಕರಣಗಳ ಬಗ್ಗೆ ಜ್ಞಾನ ಇರುವುದಿಲ್ಲ. ನನಗೆ ಬೇರೆ ಸರ್ಕಾರಿ ಕಛೇರೀಗಳಲ್ಲಿ ನಡೆಯುವ ಕೆಲಸದ ಬಗ್ಗೆ ನನಗೆ ಗೊತ್ತಿದೆ. ಈ ಪ್ರಕರಣವನ್ನು ಗ್ಯಾಸ್ ಏಜೆನ್ಸಿ ಗೆ ಸಂಬಂಧಪಟ್ಟಂತೆ ಸಲ್ಲಿಸಿರುತ್ತೇನೆ ಎಂದರೆ ಸರಿ. ನನ್ನ ಹಾಗೂ ಆರೋಪಿ ನಂಬರ್ 1 ರವರ ನಡುವೆ 2015 ರಿಂದ ವಿವಾದ ಇರುತ್ತದೆ. ಕೃಷ್ಣ ಗ್ಯಾಸ್ ಏಜೆನ್ಸಿಯ ಸಂಸ್ಥಾಪಕರು ಆರೋಪಿ ನಂಬರ್ 1 ಎಂದರೆ ಸರಿಯಲ್ಲ. ಕೃಷ್ಣ ಗ್ಯಾಸ್ ಏಜೆನ್ಸಿಯ ಸ್ಥಾಪನೆಯ ಬಗ್ಗೆ ನಾನು ಯಾವುದೇ ದಾಖಲೆಯನ್ನು ಹಾಜರು ಪಡಿಸಿಲ್ಲ. ಪಾಲುದಾರಿಕೆ ಬಗ್ಗೆ ನಾನು ದಾಖಲೆಯುನ್ನು ಹಾಜರು ಪಡಿಸಿದ್ದೇನೆ.

7. ಈ ಪ್ರಕರಣವನ್ನು ದಾಖಲೆ ಮಾಡುವ ಮುನ್ನ ನಾನು ಓ ಎಸ್ 78/2017 ರ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ದಾವೆಯು ವಜಾಗೊಂಡಿರುತ್ತದೆ ಎಂದರೆ ಸರಿ. ನಾನು ಸದರಿ ತಿರ್ಪಿನ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ಪರಕರಣಗಳಲ್ಲಿ ಆರೋಪಿ ನಂಬರ್ 1 ರವರು ತಕರಾರನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಮೇಲ್ಮನವಿ ಪ್ರಕರಣವನ್ನು ನಾನೇ ಹಿಂಪಡೆದಿದ್ದೇನೆ. ಈ ವಿಷಯಗಳ ಬಗ್ಗೆ ನಾನು ದೂರುಗಳಲ್ಲಿ ಹೇಳಿಲ್ಲ.

8. ನಾನು 1 ನೇ ಆರೋಪಿಯ ವಿರುದ್ದ ಓ ಎಸ್ ನಂಬರ್ 98/2019 ರ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ತಾತ್ಕಲಿಕ ನಿರ್ಬಂದಕಾಜ್ಞೆ ಕೋರಿ ಸಲ್ಲಿಸಿದ ಅರ್ಜಿ ವಜಾ ಆಯಿತು ಎಂದರೆ ನನಗೆ ನೆನಪಿಲ್ಲ. ಸದರಿ ಅರ್ಜಿಯ ವಿರುದ್ಧ ನಾನು ಮೇಲ್ಮನವಿ

ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ಓ ಎಸ್ ನಂಬರ್ 98/2019 ರ ಪ್ರಕರಣ ಮತ್ತು ಎಂ ಎ ಪ್ರಕರಣ ಚಾಲ್ತಿಯಲ್ಲಿರುತ್ತವೆ ಎಂದರೆ ಸರಿ. ದಾರವಾಢದಲ್ಲಿ ನನ್ನ ಹಾಗೂ ಆರೋಪಿ ನಂಬರ್ 1 ರವರ ನಡುವೆ ಆರ್ ಬಿಟ್ರೇಷನ್ ಪ್ರಕರಣ ಚಾಲ್ತಿಯಲ್ಲಿದೆ ಎಂದರೆ ಸರಿ. ಆರೋಪಿ ನಂಬರ್ 1 ರವರ ವಿರುದ್ಧ ನಾನು ಸಿಸಿ ಸಂಖ್ಯೆ 916/2018 ರ ಪ್ರಕರಣವನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ಅದು ಚಾಲ್ತಿಯಲ್ಲಿದೆ ಎಂದರೆ ಸರಿ. ಆರೋಪಿ ನಂಬರ್ 1 ರವರು ನನ್ನ ವಿರುದ್ಧ ಒಂದು ಕ್ರಿಮಿನಲ್ ಪ್ರಕರಣ ದಾಖಲು ಮಾಡಿದ್ದು ಅದು ಚಾಲ್ತಿಯಲ್ಲಿದೆ ಎಂದರೆ ಸರಿ.

9. ಕೃಷ್ಣ ಗ್ಯಾಸ್ ಏಜೆನ್ಸಿಯ ಕಛೇರಿ ಸಿರುಗುಪ್ಪ ಪೊಲೀಸ್ ಠಾಣೆಯಿಂದ ಅರ್ಧ ಕಿ.ಮೀಟರ್ ದೂರದಲ್ಲಿದೆ ಎಂದರೆ ಸರಿ. ಗ್ಯಾ ಸ್ ಏಜೆನ್ಸಿಯ ಕಛೇರಿಯಲ್ಲಿ ಅಗ್ನಿ ಶಾಮಕ ದಳ ಪೊಲೀಸ್ ಠಾಣೆಯ ದೂರವಾಣಿ ಸಂಖ್ಯೆಗಳನ್ನು ಹಾಕಿರುತ್ತೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ಗೋಡಾನ್ ನಲ್ಲಿ ಅವುಗಳನ್ನು ಕಾಣಿಸಿರುತ್ತೇವೆ ಎಂದು ನುಡಿಯುತ್ತಾರೆ. ನನಗೆ ಅಗ್ನಿ ಶಾಮಕ ಮತ್ತು ಪೊಲೀಸ್ ಠಾಣೆಯ ದೂರವಾಣಿ ಸಂಖ್ಯೆಗಳು ಗೊತ್ತಿದೆ ಎಂದರೆ ಸರಿ. ಈ ಪ್ರಕರಣದಲ್ಲಿನ ಘಟನೆ ನಡೆದ ದಿನಾಂಕ ಮತ್ತು ಸಮಯ ಬಗ್ಗೆ ನನಗೆ ನಿಖರವಾಗಿ ನೆನಪಿಲ್ಲ. ಘಟನೆಯಾದ ದಿನ ನಾನು ಲಿಖಿತವಾಗಿ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದೇನು. ಸದರಿ ದೂರನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ.

10. ಖಾಸಗಿ ದೂರನ್ನು ನಾನು ಮೇ 2017 ರಂದು ಸಲ್ಲಿಸಿದ್ದೇನೆ. ದಿನಾಂಕ ನಿಖರವಾಗಿ ನನಗೆ ನೆನಪಿಲ್ಲ. ಖಾಸಗಿ ದೂರು ಇಂಗ್ಲೀಷ್ ಭಾಷಯಲ್ಲಿ ಸಲ್ಲಿಸಿದ್ದೇನೆ. ಎಷ್ಟು ಪುಟಗಳು ಇವೆ ಎಂದು ನನಗೆ ನೆನಪಿಲ್ಲ. ದೂರನ್ನು ನಮ್ಮ ವಕೀಲರು ನನಗೆ ಓದಿ ಹೇಳಿದ್ದಾರೆ. ನಾನು ದೂರನ್ನು ಓದಿದ್ದೇನೆ. ದೂರಿನಲ್ಲಿ ನಾನು ನನ್ನ ನಾಲ್ಕು ಚೆಕ್ಕು ಗಳು ದುರುಪಯೋಗ ಆದ ಬಗ್ಗೆ ಹೇಳಿದ್ದೇನೆ. ನಾನು ಆರೋಪಿ ನಂಬರ್ 1 ರಿಂದ 5 ರವರ ವಿರುದ್ಧ ಖಾಸಗಿ ದೂರನ್ನು ದಾಖಲು ಮಾಡಿದ್ದೆ. ಪೊಲೀಸ್ ತನಿಖೆಯ ನಂತರ ರಾಮುರಾವ್ ರವರು ಅಪರಾಧ ಮಾಡಿದ್ದಾರೆ ಎಂಬುದು ಕಂಡುಬಂದಿತ್ತು. ಆರೋಪಿ ನಂಬರ್ 3 ರಿಂದ 5 ರವರ ವಿರುದ್ಧ

ಪೊಲೀಸರು ದೋಷಾರೋಪಣೆ ಸಲ್ಲಿಸಿದ ಇದ್ದ ಬಗ್ಗೆ ನಾನು ಪ್ರಶ್ನೆ ಮಾಡಿಲ್ಲ. ಸಿಸಿ ನಂಬರ್ 916/2018 ಸಹ ಈ ಪ್ರಕರಣಕ್ಕೆ ಸಂಬಂದಪಟ್ಟಿದ್ದು ಎಂದರೆ ಸರಿಯಲ್ಲ.



11. ನಾಲ್ಕು ಚೆಕ್ಕುಗಳ ಸಂಖ್ಯೆ ಬಗ್ಗೆ ನನಗೆ ಗೊತ್ತಿದೆ. ಪೊಲೀಸ್ ಠಾಣೆಗೆ ದೂರನ್ನು ನೀಡುವಾಗ ನಾಲ್ಕು ಚೆಕ್ಕುಗಳ ನಕಲನ್ನು ಕೊಟ್ಟಿದ್ದೆ. ಅದಕ್ಕೆ ಸಂಬಂಧಪಟ್ಟಂತೆ ಠಾಣಾಧಿಕಾರಿಯವರು ವಿಚಾರಣೆ ಮಾಡಿಲ್ಲ. ಠಾಣಾಧಿಕಾರಿಗಳು ಹಿಂಬರಹವನ್ನು ನೀಡಲಿಲ್ಲ. ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲು ಮಾಡಿದ ನಂತರ ಅವರು ವಿಚಾರಣೆ ಮಾಡಿ ಹಿಂಬರಹ ನೀಡಿದ ನಂತರ ಖಾಸಗಿ ದೂರನ್ನು ದಾಖಲು ಮಾಡಬೇಕೆಂದರೆ ಸರಿ. ಪ್ರಕರಣಗಳ ಬಗ್ಗೆ ಸಿರುಗುಪ್ಪ ಪೊಲೀಸ್ ಠಾಣೆಗೆ ಮಾಹಿತಿ ಇದೆ ಎಂದರೆ ಸರಿ. ಈ ಘಟನೆಯ ನಿಖರವಾದ ದಿನಾಂಕವನ್ನು ನಾನು ದೂರಿನಲ್ಲಿ ನಮೂದಿಸಿಲ್ಲ ಎಂದರೆ ಸರಿ.

12. ದಿಃ 30-11-2018 ರಂದು ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ. ನನ್ನ ಮರು ಹೇಳಿಕೆಯಲ್ಲಿ ನಾನು ಘಟನೆಯ ನಿಖರವಾದ ದಿನಾಂಕ ಹೇಳಿಲ್ಲ ಎಂದರೆ ಸರಿ. ಮರು-ಹೇಳಿಕೆಯನ್ನು ಪೊಲೀಸರು ನನಗೆ ಓದಿ ಹೇಳಿದರು. ಮರು ಹೇಳಿಕೆಯಲ್ಲಿ 5 ಜನ ಆರೋಪಿತರ ಹೆಸರು ನಮೂದಿಸಲಾಗಿದೆ ಎಂದರೆ ಸರಿ. ಮರು-ಹೇಳಿಕೆಯನ್ನು ತೆಗೆದುಕೊಂಡ ಸಮಯ ನನಗೆ ನೆನಪಿಲ್ಲ. ಪಂಚನಾಮೆ ಕಾಲದಲ್ಲಿ ಪಂಚರು ಇದ್ದರು. ನಾನು ಮರು-ಹೇಳಿಕೆಯನ್ನು ನೀಡುವಾಗ ಪಂಚರು ಇರಲಿಲ್ಲ.

**(ಈ ಹಂತದಲ್ಲಿ ಆರೋಪಿ ನಂಬರ್ 1 ರವರ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದ್ದರಿಂದ ಸಮಯಾವಕಾಶ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ.**